ಶ್ರೀ ಆಂದಾನಯ್ಯ.—ತಾವು ಈಗ ತಾನೇ ತಿಳಿಸಿದಿರಿ, ಭೂ ಅಭಿವೃದ್ಧಿ ಬ್ಯಾಂಕ್ ಮತ್ತು ಸಹಕಾರ ಸಂಘಗಳ ಮೂಲಕ ಕೇಂದ್ರ ಸರ್ಕಾರದವರು ಕೊಡತಕ್ಕಂಥ ಹಣವನ್ನು ಈ ಮೂಲಕ ರೈತರು ಪಡೆದು ಕೊಳ್ಳುತ್ತಾರೆ ಎಂದು. ಅನೇಕ ಕಡೆ ಭೂ ಅಭಿವೃದ್ಧಿ ಬ್ಯಾಂಕ್ ಮತ್ತು ಸಹಕಾರ ಸಂಘಗಳು ಡಿಫಂಕ್ಟ್ ಮತ್ತು ಡಿಫಾಲ್ಟರ್ ಆಗಿ ಕೆಲಸ ಮಾಡುತ್ತಾ ಇಲ್ಲ. ಇದರಿಂದ ರೈತರಿಗೆ ಸರಿಯಾದ ಸಹಾಯ ಸೌಲಭ್ಯ ಸಿಕ್ಕುತ್ತಾ ಇಲ್ಲ. ಈ ದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಈ ಬಗ್ಗೆ ಬಂದು ಹಣಕಾಸಿನ ಕಾರ್ಪೊರೇಷನ್ ತೆರೆಯುವುದಕ್ಕೆ ಯೋಚನೆ ಮಾಡುತ್ತೀರಾ ?

ಶ್ರೀ ಎಸ್. ಎಂ ಕೃಷ್ಣ.—ಪ್ರತ್ಯೇಕವಾದ ಒಂದು ಕಾರ್ಪೊರೇಷನ್ ಅನ್ನು ಹೊಸದಾಗಿ ಸ್ಥಾಪನೆ ಮಾಡುವುದಕ್ಕೆ ಸಾಕಷ್ಟು ಕಾರಣಗಳು ಇಲ್ಲ ಯಾವುದಾದರೂ ಕೂಡ ಡಿಫಂಕ್ಟ್ ಮತ್ತು ಡಿಫಾಲ್ಟರ್ ಆಗಿದ್ದರೆ ಅದನ್ನು ಬೇಕಾದರೆ ಪುನರುಜ್ಜೀವನಗೊಳಿಸುವುದರಲ್ಲಿ ಅರ್ಥ ಇದೆ.

ಶ್ರೀ ಟಿ. ರಾಮೇಗೌಡ —ಈಗ ಭೂ ಅಭಿವೃದ್ಧಿ ಬ್ಯಾಂಕುಗಳಲ್ಲಿ ಶೇಕಡ ೫೦ ಭಾಗ ಕೂಡ ರೈತರಿಗೆ ಸಹಾಯ ಮಾಡುವಂಥ ಕೆಲಸಕಾರ್ಯಗಳು ನಡೆದಿಲ್ಲ. ಮತ್ತು ಇಂಡಸ್ಟ್ರಿಯಲ್ ಕಾರ್ಪೊರೇಷನ್ ವಗೈರೆ ಮೊದಲಾದ ಸಂಘ ಸಂಸ್ಥೆಗಳು ಈಗ ಏನು ಇವೆ ಅವುಗಳಲ್ಲಿ ಈ ರೈತರ ಬಗ್ಗೆ ಕಾರ್ಯಕ್ರಮಗಳು ಇವೆಯೇ ಹೊರತು ಅದರ ಫಲ ಸರಿಯಾದ ರೀತಿಯಲ್ಲಿ ದೊರಕಿಲ್ಲ. ಆದುದರಿಂದ ಅವುಗಳಲ್ಲಿ ರೈತರಿಗೆ ಹೆಚ್ಚಿನ ಫಲ ದೊರೆಯುವಂತೆ ಮಾಡಲು ಇದನ್ನು ಪುನರಾಲೋಚನೆ ಮಾಡುತ್ತೀರಾ ?

ಶ್ರೀ ಎಸ್. ಎಂ. ಕೃಷ್ಣ.—ಅದು ಒಂದು ಸಲಹೆ. ಆ ಸಲಹೆಯನ್ನು ಪರಿಶೀಲಿಸುತ್ತೇನೆ.

Increase in Rate of Levy Paddy, Jowar etc..

878. SRI S. BANGARAPPA (Sorab).—

Will the Minister for Food and Civil Supplies be pleased to state.-

(*a*) whether there is any proposal before Government to raise the rate of Levy Paddy, Jowar etc.,

(*b*) if so, the proposed rate ;

(*c*) whether it has come to the notice of the Government that the present rate of levy paddy is very low and the agriculturists are unable to meet the high prices of daily commodities ?

SMT. E. E. VAZ (Minister for Food and Civil Supplies) —

(*a*) No.

(*b*) Does not arise.

(*c*) The purchase price is considered as adequate.

ಶ್ರೀ ಎಸ್. ಬಂಗಾರಪ್ಪ —(ಅ) ಗೆ ಉತ್ತರವಾಗಿ ಇಲ್ಲವೆಂದು ಹೇಳಿದ್ದೀರಿ. ನನಗೆ ಗೊತ್ತಿರುವ ಹಾಗೆ ಸೆಂಟ್ರಲ್ ಲೆವಲ್‌ನಲ್ಲಿ ಪ್ರೈಸ್ ಜಸ್ಟಿಫಿಕೇಷನ್ ಕಮಿಟಿ ಏನು ಇದೆ ಅವರು ಪ್ರತಿವರ್ಷವೂ ಕೂಡ ಡೈಲಿ ನೀಡ್ಸ್ ಮತ್ತು ಕೆಮಿಕಲ್ ಮ್ಯಾನ್ಯೂರ್ ಯಾವ ರೀತಿ ಜಾಸ್ತಿ ಆಗುತ್ತದೋ ಅದೇ ರೀತಿ ರೈತರಿಗೆ ಏನಾ ಒಂದಾ ಬೆಲೆ ನಿಗದಿ ಮಾಡಬೇಕೋ ಆ ರೀತಿ ನಿಗದಿ ಮಾಡುತ್ತಾರೆ ಎಂದು ನಾನು ತಿಳಿದಿದ್ದೇನೆ. ಆದರೆ ರೀತಿ ಈ ವರ್ಷ ಬೆಲೆ ಜಾಸ್ತಿ ಮಾಡಿದ್ದಾರೆ. Has the Committee taken any decision not to raise this rate of Paddy Jowar ?

† ಶ್ರೀಮತಿ ಇ. ಇ ವಾಜ್.—೧೯೭೪-೭೫ರಲ್ಲಿ ಅದಂಥ ಬೆಲೆಯನ್ನು ಇದರಲ್ಲಿ ಕೊಟ್ಟಿದೆ. ಪ್ರತಿ ವರ್ಷವೂ ಸೆಪ್ಟೆಂಬರ್ ಮತ್ತು ಅಕ್ಟೋಬರ್ ತಿಂಗಳಲ್ಲಿ ಆ ವರ್ಷ ಬರುವ ಬೆಳೆಗೆ ಒಂದು ಬೆಲೆಯನ್ನು ನಿರ್ಧಾರ ಮಾಡುತ್ತಾರೆ. ಅದರಂತೆ ಈ ವರ್ಷ ೧೯೭೪-೭೫ಕ್ಕೆ ದಪ್ಪಕ್ಕಿ ಕ್ವಿಂಟಾಲಿಗೆ ೭೪ ರೂಪಾಯಿ ಎಂದು ನಿರ್ಧಾರ ಮಾಡಿದ್ದಾರೆ. ಇನ್ನು ೧೯೭೫-೭೬ಕ್ಕೆ ಯಾವ ಸಮೂನೆಯಲ್ಲಿ ಬೇರೆ ಸಾಮಾನುಗಳ ಬೆಲೆ ಇರಂತ್ತದೋ ಅದರಂತೆ ನಿಗದಿ ಮಾಡುತ್ತಾರೆ. ಅದರಲ್ಲಿ ಸ್ವಲ್ಪ ಹೆಚ್ಚು ಕಡಿಮೆ ಆಗಬಹುದು.

ಸಾಮಾನ್ಯವಾಗಿ ೧೯೬೭-೬೮ ರಿಂದ ೧೯೭೪-೭೫ರವರೆಗೆ ಸಾಧಾರಣವಾಗಿ ದಪ್ಪ ಅಕ್ಕಿ ೬೪.೪ ಪರ್ಸೆಂಟ್ ಜಾಸ್ತಿಯಾಗಿದೆ, ಮೀಡಿಯಂ ರೈಸ್ ೭೧.೭ ಪರ್ಸೆಂಟ್ ಜಾಸ್ತಿಯಾಗಿದೆ, ಬಿಳಿ ಜೋಳಕ್ಕೆ ೭ ಪರ್ಸೆಂಟ್ ಹೆಚ್ಚಾಗಿದೆ. ಅದೇ ರೀತಿಯಲ್ಲಿ ಪ್ರತಿವರ್ಷವೂ ಕೂಡ ಅಕ್ಕೋಬರ್‌ನಲ್ಲಿ ಬೆಲೆಗಳು ಹೀಗೆ ಜಾಸ್ತಿ ಇರುತ್ತದೋ ಅದೇ ರೀತಿಯಾಗಿ ರೈತರಿಗೂ ಕೂಡ ಬೆಲೆಯನ್ನು ಜಾಸ್ತಿ ಮಾಡಿದ್ದಾರೆ ತಮಗೆ ಗೊತ್ತಿರುವಹಾಗೆ in order to safeguard the interests of the grower who is the backbone of the Society, Government have been fixing reasonable rate for the levy on the food grains that were being collected from the farmers.

ಶ್ರೀ ಎಸ್. ಬಂಗಾರಪ್ಪ.—ತಾವು ಈಗತಾನೇ ಹೇಳಿದಿರಿ. ಈ ಬೆಲೆಗಳನ್ನು ನಿಗದಿ ಮಾಡತಕ್ಕ ಕಾಲದಲ್ಲಿ ಕೇಂದ್ರ ಸರ್ಕಾರದವರು ಎಲ್ಲಾ ಅಂಕಿ ಅಂಶ ತರಿಸಿಕೊಂಡು ಬೆಲೆಯನ್ನು ನಿಗದಿ ಮಾಡುತ್ತಾರೆಂದು ಕಾರಣ ಹೇಳಿದ್ದೀರಿ.ಕಳೆದ ವರ್ಷ ಕೆಮಿಕಲ್ ಮೆನ್ಯೂರ್ ಬೆಲೆಏಷ್ಟು ಜಾಸ್ತಿಯಾಗಿದೆ ಮತ್ತು ಅಗತ್ಯ ವಸ್ತುಗಳ ಬೆಲೆಗಳು ಎಷ್ಟು ಜಾಸ್ತಿಯಾಗಿದೆ ಎನ್ನುವುದನ್ನು ನೋಡಿ. ಕೊನೇ ಪಕ್ಷ ಈ ಸಾರಿ ಇಲ್ಲದಿದ್ದರೂ ಮುಂದಿನ ವರ್ಷಕ್ಕಾದರೂ ಜಾಸ್ತಿ ಬೆಲೆ ನಿಗದಿ ಮಾಡುವುದಕ್ಕೆ ಯೋಚನೆ ಮಾಡುತ್ತೀರಾ ?

SMT. E. E. VAZ.—Taking into consideration all these matters *i.e.*, the cost of imputs and the other essential commodities required for the growers, certainly, the Government will see that a reaeonable rate is given to the farmers and also to the food grains that are procured through them.

ಶ್ರೀ ಕಾಗೋಡು ತಿಮ್ಮಪ್ಪ.—ಸ್ವಾಮಿ, ರಾಜ್ಯಮಟ್ಟದಲ್ಲಾದರೂ ಕೂಡ ಅಗ್ರಿಕಲ್ಚರ್ ಕಮೀಷನರ್ ಈ ಬಗ್ಗೆ ಏನು ಅಭಿಪ್ರಾಯ ಕೊಡುತ್ತಾರೆ, ಅವರ ಅಭಿಪ್ರಾಯ ಪಡೆಯುವುದಕ್ಕೆ ಮುಂಚೆ ಮತ್ತು ಆಯಾಯ ವರ್ಷಕ್ಕನುಗುಣವಾಗಿ ಯಾವರೀತಿ ಬೆಲೆ ನಿಗದಿ ಮಾಡುತ್ತಾರೋ ಆ ಬೆಲೆಯನ್ನು ನಿಗದಿ ಮಾಡುವುದಕ್ಕೆ ತ ಮುಂಚೆ, ವ್ಯವಸಾಯಗಾರರ ಮತ್ತು ವ್ಯವಸಾಯ ತಜ್ಞರೊಂದಿಗೆ ಸಮಾಲೋಚನೆ ಮಾಡಿ ಅವರ ಅಭಿಪ್ರಾಯ ಪಡೆದು ರಾಷ್ಟ್ರೀಯ ಆಯೋಗಕ್ಕೆ ತಿಳಿಸುವಂತೆ ಕ್ರಮ ಕೈಗೊಳ್ಳುತ್ತೀರಾ ?

ಶ್ರೀಮತಿ ಇ. ಇ. ವಾಜ್.—ಈ ವಿಷಯದ ಮೇಲೆ ಯೋಚನೆ ಮಾಡಿ ಈ ಸಲ ಇಷ್ಟು ಕ್ರಯ ಕೊಡಬೇಕೆಂದು ನಿರ್ಧಾರ ಮಾಡಿದ್ದಾರೆ. ಮುಂದಿನ ಸಲ ಏನಾದರೂ ಈ ಬಗ್ಗೆ ಕ್ರಮ ಕೈಗೊಳ್ಳಬೇಕಾದ್ದಲ್ಲಿ ಈಗ ತಾವು ಏನು ಸಲಹೆ ಕೊಟ್ಟಿದ್ದೀರಿ ಅದನ್ನು ಪರಿಶೀಲಿಸಬಹುದು

ಶ್ರೀ ಕೋಣಂದೂರು ಲಿಂಗಪ್ಪ—ಸ್ವಾಮಿ, ಭಾರತ ಸರ್ಕಾರದವರು ಹೊರದೇಶದಿಂದ ಆಹಾರಧಾನ್ಯವನ್ನು ತರಿಸಲು ಒಂದು ಕ್ವಿಂಟಾಲಿಗೆ ೧೨೧-೧೩೦ ರೂಪಾಯಿ ಕೊಟ್ಟು ತೆಗೆದುಕೊಳ್ಳುತ್ತಾ ಇರುವುದು ತಮ್ಮ ಗಮನಕ್ಕೆ ಬಂದಿದೆಯೇ ? ಆದರೆ ನಮ್ಮ ರೈತರಿಗೆ ಈ ಬೆಲೆ ಕೊಡುವುದಕ್ಕೆ ತಮಗೆ ಇರತಕ್ಕಂಥ ತೊಂದರೆ ಏನು ?

ಶ್ರೀಮತಿ ಇ. ಇ. ವಾಜ್.—ಅಗತ್ಯವಾಗಿರತಕ್ಕಂಥ ಯಾವುದಾದರೂ ವಸ್ತುಗಳನ್ನು ಹೊರದೇಶದಿಂದ ಕೊಂಡುಕೊಳ್ಳಬೇಕಾದರೆ ಹೆಚ್ಚು ಕಡಿಮೆ ಬೆಲೆ ಕೊಡಲೇಬೇಕಾಗುತ್ತದೆ. ಒಂದು ವೇಳೆ ಜಾಸ್ತಿಯಾದರೂ ಕೊಡಲೇ ಬೇಕಾಗುತ್ತದೆ. ಆದರೆ ನಮ್ಮ ರೈತರು ತಾವು ಬೆಳೆಯತಕ್ಕಂಥ ಪದಾರ್ಥವನ್ನು ನಮಗೆ ಕೊಡಲು ಅವರು ಸ್ವಲ್ಪವಾದರೂ ಕೂಡ ತ್ಯಾಗ ಮಾಡಬೇಕಾಗುತ್ತದೆ.

ಶ್ರೀ ಸಿ. ಬೈರೇಗೌಡ.—ಕೇಂದ್ರ ಸರ್ಕಾರದವರು ನಿಗದಿ ಮಾಡತಕ್ಕಂಥ ಬೆಲೆಯನ್ನು ನೀವು ನಿಗದಿ ಮಾಡುತ್ತೀರಿ. ಇದಕ್ಕೆ ಅನೇಕ ಕಾರಣಗಳನ್ನು ಹೇಳುತ್ತೀರಿ. ನೀವು ಅವರಿಗೆ ಒಂದು ಹೆಚ್ಚಿನ ಬೆಲೆ ಕೊಡುವುದಕ್ಕೆ ಅಧಿಕಾರ ಇಲ್ಲವೇ ? ಈಗ ಕೆಮಿಕಲ್ ಮೆನ್ಯೂರ್ ಮತ್ತು ಇತರ ಸಾಮಾನುಗಳ ಮೇಲೆ ಜಾಸ್ತಿಯಾಗಿರುವ ಬೆಲೆಗಳನ್ನು ಗಮನದಲ್ಲಿಟ್ಟು ಕೊಂಡು ನಮ್ಮ ರೈತರಿಗೆ ಒಂದು ಹೆಚ್ಚಿನ ಬೆಲೆ ನಿಗದಿ ಮಾಡುವಂತೆ ಏರ್ಪಾಡು ಮಾಡುತ್ತೀರಾ ? ಮತ್ತು ಶ್ರೀಮಾನ್ ಕೋಣಂದೂರು ಲಿಂಗಪ್ಪನವರು ಹೇಳಿದ ಹಾಗೆ ಹೊರಗಡೆಯಿಂದ ಬರುವ ಆಹಾರಧಾನ್ಯಕ್ಕೆ ೧೨೧ ರೂಪಾಯಿ ಬೆಲೆ ಕೊಟ್ಟು ನಮ್ಮಲ್ಲಿ ಬೆಳೆಯುತಕ್ಕಂಥ ರೈತನಿಗೆ ಇಷ್ಟು ಕಡಿಮೆ ಬೆಲೆ ಕೊಡುವುದು ನ್ಯಾಯವೇ ? ಮತ್ತು ರೈತ, ಸಮಾಜವಾದೀ ದೇಶದ ಬೆನ್ನುಮೂಳೆ ಅಂತ ಹೇಳಿ ಅವನ ಬೆನ್ನುಮೂಳೆಯನ್ನು ಮುರಿಯುವಂತೆ ಮಾಡುತ್ತಿದ್ದೀರಲ್ಲಾ, ಇದು ನ್ಯಾಯವೇ ?,

ಅಧ್ಯಕ್ಷರು.—ರೈತರು ಬಿನ್ನಮ್ಮೂಳೆ ಅಂತ ಯಾರು ಹೇಳಿದರು ?

ಶ್ರೀ ಸಿ. ಬೈರೇಗೌಡ.—ಇವೆಲ್ಲಾ ರೈತನ ಬೆನ್ನುಮೂಳೆ ಮುರಿಯುವಂಥ ಪ್ರಯತ್ನಗಳಲ್ಲದೆ ಮತ್ತೇನು ?

ಶ್ರೀಮತಿ ಇ. ಇ. ವಾಜ್.— ನಾನು ಮೊದಲೇ ಉತ್ತರ ಕೊಟ್ಟಿದ್ದೇನೆ. ಕೇಂದ್ರ ಸರ್ಕಾರದವರೇ ಇದಲಿ ಯಾರೇ ಇರಲ್ಲಿ ಕಣ್ಣುಮುಚ್ಚಿಕೊಂಡು ಕುಳಿತುಕೊಳ್ಳುವುದಿಲ್ಲ. ಪ್ರತಿಯೊಂದು ರಾಜ್ಯದಲ್ಲೂ ಮಾಹಿತಿ ಯನ್ನು ತರಿಸಿಕೊಂಡು ಅದರ ಮೇಲೆ ಯೋಚನೆ ಮಾಡುತ್ತಾರೆ ಮತ್ತು ನಮ್ಮ ರಾಜ್ಯಕ್ಕೆ ಸಂಬಂಧಪಟ್ಟಂಥ ಇಲಾಖೆಗಳಿಂದ ಮಾಹಿತಿ ತರಿಸಿಕೊಂಡು ಅದಕ್ಕೆ ಹಿಂದೆ ಏನು ಬೆಲೆ ಇತ್ತು ಈಗ ಇತರ ಪದಾರ್ಥಗಳ ಬೆಲೆ ಏನು ಇದೆ ಅವೆಲ್ಲಾ ಯೋಚನೆ ಮಾಡಿ ಅವರು ಒಂದು ಬೆಲೆಯನ್ನು ನಿರ್ಧಾರ ಮಾಡುತ್ತಾರೆ. ಈಗ ತಮಗೆ ಗೊತ್ತಿರುವ ಹಾಗೆ ನಮ್ಮ ಸರ್ಕಾರದವರೇ ಈ ವರ್ಷ ಲೆವಿ ದರವನ್ನು ೬ ರೂಪಾಯಿ ಜಾಸ್ತಿ ಮಾಡಿದ್ದಾರೆ, ನಮ್ಮ ರೈತರಿಗೆ ಸಹಾಯ ಮೂಡೋಣವೆಂಬ ಉದ್ದೇಶದಿಂದ ಮಾಡಿದ್ದೇವೆ ಎಂದು ಹೇಳುತ್ತೇನೆ.

ಶ್ರೀ ಬಾಪೂಗೌಡ ರಾಯಪ್ಪ —ಜೋಳಕ್ಕೆ ಕ್ವಿಂಟಾಲ್‌ಗೆ ೭೫ ಹಾಗೂ ೮೦ ರೂಪಾಯಿಗಳು ಎಂದು ನಿಗದಿ ಮಾಡುವಾಗ ಯಾವ ಆಧಾರದ ಮೇಲೆ ಮಾಡಿದ್ದಾರೆ ? ಕೇಂದ್ರ ಸರಕಾರಕ್ಕೆ ಇಲ್ಲಿರುವ ಬೆಲೆಗಳ ಬಗ್ಗೆ ಸರಿಯಾದ ತಿಳುವಳಿಕೆ ಕೊಟ್ಟಿರಲಿಲ್ಲವೇ ?

ಶ್ರೀಮತಿ ಇ. ಇ. ವಾಜ್,—ಇದನ್ನು ನಿಗದಿ ಮಾಡುವವರು ಕೇಂದ್ರ ಸರಕಾರದವರು. ಇದರಲ್ಲಿ ಹೆಚ್ಚು ಕಡಿಮೆ ಮಾಡುವುದು ಅವರಿಗೇಸೇರಿದ್ದು.

ಶ್ರೀ ಹೆಚ್. ಡಿ. ದೇವೇಗೌಡ.— ಉತ್ತರದವರಿಗೆ ಒದೆಯುವುದಕ್ಕೆ ಶಕ್ತಿ ಇದೆ. ಆದ್ದರಿಂದ ಅವರಿಗೆ ಹೆಚ್ಚು ಬೆಲೆ ಕೊಡುತ್ತಾರೆ. ಆದರೆ ದಕ್ಷಿಣದವರಿಗೆ ಆ ರೀತಿ ಒದೆಯುವುದಕ್ಕೆ ಶಕ್ತಿ ಇಲ್ಲ ಎಂದು ಅವರು ಸುಮ್ಮನಿದ್ದಾರೆ.

ಶ್ರೀಮತಿ ಇ. ಇ. ವಾಜ್.—ಯಾರಿಗೂ ಅನ್ಯಾಯವಾಗದಂತೆ, ಎಲ್ಲರಿಗೂ ಸರ್ವೇಸಾಮಾನ್ಯವಾಗಿ ಅನುಕೂಲವಾಗುವಂತೆ ಕೇಂದ್ರ ಸರಕಾರದವರು ಬೆಲೆಗಳನ್ನು ನಿಗದಿ ಮಾಡುತ್ತಾರೆ.

ಶ್ರೀ ಕಾಗೋಡು ತಿಮ್ಮಪ್ಪ.—ಜೋಳದ ಬೆಲೆಯನ್ನು ಕೇಂದ್ರದವರು ಈ ರೀತಿ ನಿಗದಿ ಮಾಡಲು ಇದ್ದಂತಹ ಕಾರಣಗಳಾದರೂ ಏನು ?

ಶ್ರೀಮತಿ ಇ. ಇ ವಾಜ್.—ಅಗ್ರಿಕಲ್ಚರ್ ಕಮಿಷನ್‌ನವರು ಎಲ್ಲ ವಿಚಾರಗಳನ್ನೂ ವಿಚಾರ ಮಾಡಿ ಕೊಂಡು ಬೆಲೆಗಳನ್ನು ನಿಗದಿ ಮಾಡುತ್ತಾರೆ. ಕರ್ನಾಟಕದವರು ಹಿಂದೆ ಲೆವಿ ಬೆಲೆಯನ್ನು ಜೋಳಕ್ಕೆ ೩೭ ರೂಪಾಯಿಗಳು ನಿಗದಿ ಮಾಡಲಾಗಿದೆ ಎಂದು ಹೇಳಿದಾಗ ಅದನ್ನು ಗಮನದಲ್ಲಿಟ್ಟು ಕೊಂಡು ನಮ್ಮ ರಾಜ್ಯದಲ್ಲಿ ಜೋಳದ ಬೆಲೆ ಕ್ವಿಂಟಾಲ್‌ಗೆ ೭೪ ರೂಪಾಯಿ ಇರಬೇಕೆಂದು ಆಪರೇ ನಿಗದಿ ಮಾಡಿದ್ದಾರೆ.

ಶ್ರೀ ವಿ. ಎನ್. ಪಾಟೀಲ್.—ಜೋಳವನ್ನು ಒಂದು ಕ್ವಿಂಟಾಲ್ ಹಿಂದೆ ೩೭ ರೂಪಾಯಿ ಎಂದು ನಿಗದಿ ಮಾಡಲು ತಮಗೆ ಇದ್ದಂತಹ ಸೈಂಟಿಫಿಕ್ ಅಪ್ರೋಚ್ ಆದರೂ ಯಾವುದು ? ಲೇವಿದರ ೭೪ ರೂಪಾಯಿ ನಿಗದಿ ಮಾಡಲಾಗಿದೆ ಎಂದು ಸರಕಾರದವರು ಈಗ ಹೇಳುತ್ತಾರೆ, ಆದರೆ ಇಂದು ಪೇಟೆ ಯಲ್ಲಿ ಒಂದು ಕ್ವಿಂಟಲ್‌ಗೆ ೩೦೦ ರೂಪಾಯನಂತೆ ಬೆಲೆ ಇದೆ. ನಮ್ಮ ರಾಜ್ಯದಲ್ಲಿ ಕ್ವಿಂಟಾಲ್‌ಗೆ ೭೪ ರೂಪಾಯಿಗಳಂತೆ ತೆಗೆದುಕೊಳ್ಳುತ್ತಾರೆ ಎಂದು ಹೇಳಲು ತಮಗೆ ಇರುವಂಥಹ ಆಧಾರಗಳಾದರೂ ಯಾವುವು ?

ಶ್ರೀಮತಿ ಇ. ಇ ವಾಜ್.—ಸೈಂಟಿಫಿಕ್ ಅಪ್ರೋಚ್ ಇಟ್ಟುಕೊಂಡೇ ಸರಕಾರ ಬೆಲೆಗಳನ್ನು ನಿಗದಿ ಮಾಡು ತ್ತಿರುವುದು. ಸರಕಾರದವರು ಎಷ್ಟು ರೇಟು ನಿಗದಿ ಮಾಡಿಕೊಳ್ಳುತ್ತಾರೋ ಅದರಂತೆ ಮಾರುವಾಗಲೂ ನಿಗದಿ ಮಾಡಿ ಮಾರುತ್ತಾರೆ ಸರಕಾರದವರು ಮಾರುತ್ತಿರುವ ಬೆಲೆ ಈಗಕ್ವಿಂಟಾಲ್‌ಗೆ ೧೪೫ ರೂಪಾಯಿ ಇದೆ. ಆದರೆ ಈಚೆಗೆ ಹರಿಯಾಣ ಹಾಗೂ ಪಂಜಾಬಿನಿಂದ ಓಪನ್ ಮಾರ್ಕೆಟ್ಟಿನಿಂದ ಹೆಚ್ಚು ಬೆಲೆ ಕೊಟ್ಟು ಗೋಧಿ ಯನ್ನು ತಂದುದರಿಂದಾಗಿ ಒಂದು ಕ್ವಿಂಟಾಲ್‌ಗೆ ೧೯೨ ರೂಪಾಯಿಗಳಂತೆ ಮಾರುತ್ತಿದ್ದಾರೆ. ನಮ್ಮ ರಾಜ್ಯದಲ್ಲಿ ಗೋಧಿಯಬೆಲೆ ಒಂದು ಕ್ವಿಂಟಾಲ್‌ಗೆ ೩೦೦ ರೂಪಾಯಿಗಳಂತೆ ಇಲ್ಲ.

ಶ್ರೀ ಆರ್. ಎಸ್. ಪಾಟೀಲ್.—ಜೋಳವನ್ನು ಮಾರುವಾಗ ಇದರ ಕಾಸ್ಟ್ ಆಫ್ ಕಲ್ಟಿವೇಷನ್ ಗಮನದಲ್ಲಿಟ್ಟುಕೊಂಡು ಕ್ವಿಂಟಾಲ್‌ಗೆ ೧೨೫ ರೂಪಾಯಿಗಳಂತೆ ಮಾರಿದ್ದಾರೆ. ಒಂದು ಎಕರಗೆ ವ್ಯವಸಾಯದ ಖರ್ಚು ಇದಕ್ಕೆ ಸುಮಾರು ೭೦ ರಿಂದ ೭೫ ರೂಪಾಯಿಗಳಾಗಬಹುದು; ಇವನೆಲ್ಲ ಲೆಕ್ಕ ಹಾಕಿಕೊಂಡು ೧೪೫ ರೂಪಾಯಿನಂತೆ ಮಾರಬಹುದು ಎಂದು ನಿಗದಿ ಮಾಡಿರುತ್ತಾರೆ. ಕರ್ನಾಟಕದಲ್ಲಿ ಬೆಳೆಯುವ ಜೊಳದ ಪ್ರಮಾಣ ಎಷ್ಟು ಇದೆ ಎಂದರೆ, ೦೮೧ ಇದನ್ನು ಗಣನೆಗೆ ತೆಗೆದುಕೊಂಡರೆ ಜೋಳದ ಲೆವಿ ಬೆಲೆ ಕ್ವಿಂಟಾಲ್‌ಗೆ ೭೪ ರೂಪಾಯಿ ಎಂದು ನಿಗದಿ ಮಾಡಿರುವುದು ಬಹಳ ಅನ್ಯಾಯವಾಗಿದೆ. ಇದರ ಬಗ್ಗೆ ನ್ಯಾಯವಾದ ರೀತಿಯಲ್ಲಿ ಜೋಳದ ಬೆಲೆ ನಿಗದಿ ಮಾಡಬೇಕೆಂದು ಕೇಂದ್ರಸರಕಾರಕ್ಕೆ ಒತ್ತಾಯ ಮಾಡುವುದು ಸರಿಯಾಗಿರುವುದಲ್ಲವೇ ?

ಶ್ರೀಮತಿ ಇ. ಇ. ವಾಜ್.—ಇದನ್ನು ಲೋಕ ಸಭೆಯ ಸದಸ್ಯರು ಕೇಳಬೇಕು. ನಾವು ಇಲ್ಲಿ ಕೇಳುವುದಿಲ್ಲ, ಸರ್ಕಾರ ಇದರ ಬಗ್ಗೆ ಒಂದು ರಾಷ್ಟ್ರೀಯ ನೀತಿ ಅನುಸರಿಸಬೇಕೆಂದು. ಹೇಳಿದ್ದೇವೆ. ಅದರಂತೆ ಅಗ್ರಿಕಲ್‌ಚರಲ್ ಕಮಿಷನ್ ಅವರು ವಿಚಾರ ಮಾಡಿ ಬೆಲೆಗಳನ್ನು ನಿಗದಿ ಮಾಡುತ್ತಾರೆ.

ಶ್ರೀ ಎಸ್. ಬಂಗಾರಪ್ಪ —೧೯೬೭-೬೮ ರಿಂದಲೂ ಅಗತ್ಯ ವಸ್ತುಗಳ ಬೆಲೆ ಏರುತ್ತಲೇ ಇದೆ ಇದರ ಮೇಲೆ ಎಷ್ಟು ಪರ್ಸೆಂಟೇಜು ಆಕ್ಕಿ ಬೆಲೆ ಏರಿದೆ ಎಂದೂ ಹೇಳಿದ್ದಾರೆ. ನಮ್ಮ ರಾಜ್ಯದಲ್ಲಿ ಅಲ್ಲದೆ ಎಲ್ಲ ಕಡೆಗಳಲ್ಲೂ ಅಗತ್ಯ ವಸ್ತುಗಳ ಬೆಲೆ ಹೆಚ್ಚಾಗಿ ಹೋಗಿದೆ ಎಂದರೆ ಶೇಕಡ ೩೦೦ ರಿಂದ ೩೫೦ ರಷ್ಟು ಹೆಚ್ಚಾಗಿದೆ. ಇವನ್ನೆಲ್ಲಾ ಕೇಂದ್ರ ಸರಕಾರದ ಅಗ್ರಿಕಲ್ಚರ್ ಕಮಿಷನ್‌ನವರು ಬೆಲೆ ನಿಗದಿ ಮಾಡುವಾಗ ಅವರ ಗಮನಕ್ಕೆ ತಂದಿದ್ದರೆ ಅವರು ಜೋಳದ ಬೆಲೆಯನ್ನು ನಿಗದಿ ಮಾಡುವಾಗ ಏಕೆ ನ್ಯಾಯವಾಗಿ ಮಾಡಲಿಲ್ಲ ಎಂದು ಕೇಳಬಾರದು ? ಈಗಲಾದರೂ ರೈತರ ಹಿತದೃಷ್ಟಿಯಿಂದ ಬೆಲೆಯನ್ನು ಹೆಚ್ಚು ಏರಿಸಲು ಏಕೆ ಯೋಚನೆ ಮಾಡಬಾರದು ?

ಶ್ರೀಮತಿ ಇ. ಇ. ವಾಜ್.—ಮಾನ್ಯ ಸದಸ್ಯರ ಸಲಹೆಯನ್ನು ಗಮನದಲ್ಲಿಟ್ಟುಕೊಂಡೇ ಅವರಿಗೆ ತಿಳಿಸಲಾಗಿದೆ.

† SRI M. Y. GHORPADE (Minister for Finance and Housing).—Madam Speaker, I am also a farmer and I am also intereste l in this subject. It is well-known that whenever discussion takes place in New Delhi about this subject, almost every State Government including Karnataka do press for reasonable rates commensurate with the conditions. The Agricultural Price commission which as been set up by the Government of India has taken a dispassionate and asademic view that this should be kept out of politics. The Agricultural Price Commission announces certain rates and almost all State Governments should invariably agree with it because in all State Governments the agricultural lobby is reflected and they voice the wishes of the agriculturists. The Governments continue to argue that there must be certain difference between the levy price and the the open market price and the levy price will have to be below the open merket price. The concept of the levy on the farmer is that the farmer should part with certain small portion of the total production so that the levy grain is used to see that the people below the poverty line get some grain at reasonable rates and not thrown to the mercy of the open market. It has been done in the interest of the people who are below the poverty line. The price on levy grain is fixed by the Agricultural price Commission in a scientific manner taking into cons deretion the conditions that are prevailing. The Hon. Members were speaking about the cost of the jowar and certain other grains. These facts were placed before the Government of India and the Agricultural Commission actually fixes the price taking into consider

ation the prevailling conditions. This fact has been stated by the Hon. Food Minister. If at all any grains or fixation of pirce of such grains are to be urged before the Agricultural Price Commission, it can be urged before the Commission through the State Government.

It is precisely to get this issue out of politics that the Government leaniheavlly on the Agricultural Price Commission. They are manned by well-known economists of known integrity in the country.

2-30 P. M.

All that I am submitting is this. The levy prices are as per the norms of the Agricultural Price Commission, Every State Government, including Karnataka Government, taking into consideration the difficulties of the farmer, tries to get as favourable a levy price as possible. There has to be a difference between the levy price and the price in the open market. Unless the levy price is below the open market price, the purpose of this will be defeated. Certain amount of sugar is taken away at levy rate and the rest is sold in open market and the profitability of sugar industry depends on the total effect of it. Therefore, I am submitting that the capacity of the sugar producer to bear the increase in the cost of production depends not only on the levy rate but on that portion of his produce which he is able to sell in the open market at a higher rate.

MADAM SPEAKER,—The question hour is over.

QUESTIONS FOR ANSWERS ON THE DAY (but not taken up)

Schemes Sponsored by NCDC in Co-operative Sector

41. SRI J. S. AMMANNAVAR (Sadalga).—

Will the Minister for Co-operation be pleased to state :—

(*a*) the names of various schemes in Co-operative Sector that were sponsored by the NCDC during 1973-74 ;

(*b*) which of such schemes were taken up by the State during the year 1973-74 ;

(*c*) which of such schemes were not taken up and the reasons therefor ;

(*d*) the total amount of assistance both loan and subsidy that the State has availed of from the NCDC so far during 1973-74 ?

SRI K. H. RANGANATH (Minister for Co-operation).—

(*a*) - 1. Financing small and medium sized proceesing units.

2. Establishment of technical and promotional cell in the Apex Co-operative Marketing Federation.

3. Central Sector sponsored scheme for strengthening the share capital base of selected Co-operative Marketing Societies.